**ವ್ಯಾಖ್ಯಾನ**

# <u>ಅಲ್ಲದ ಕರ್ಮವ ಆಚರಿಸಿದವ ಕೆಟ್ಟ</u>

## ಕೆಡದಿರಲು ನಂಬೋಣ

ದಾಸರು 'ಸಂಗವಾಗಲಿ ಸಾಧುಸಂಗವಾಗಲಿ' ಎಂದರು. ಕಾರಣ, ನೀವು ಸತ್ಪಥದಿಂದ ದೂರಾಗದಿರಲು. ಇದಕ್ಕಾಗಿ ಸತ್ಪಂಥ, ಸನ್ನಡತೆ, ಸದ್ಧರ್ಮಾಚರಣೆ ನಮ್ಮದಾಗಬೇಕು. ಅದೊಂದೇ ಜೀವನದಲ್ಲಿ ಕೆಡದಿರಲು, ದುರ್ಗತಿ ಹೊಂದದಿರಲು ಇರುವ ಮಾರ್ಗವಾಗಿದೆ. ಹರಿದಾಸರು ಸನ್ಮಾರ್ಗ ಬೋಧಕರು. ನಮ್ಮಿಂದ ಅಪರಾಧಗಳಾಗದಂತೆ ಅನೇಕ ರೀತಿ-ನೀತಿಗಳಿಂದ ಬೋಧಿಸಿದರು. ಅದಕ್ಕೆಂದೇ ಶ್ರೀವ್ಯಾಸರಾಜರು ಹೇಳಿದ ಮಾತು -

**ಮಾಡು ಎಂದದನ್ನು ಬಿಟ್ಟರೆ ಅಪರಾಧ ।**
**ಬೇಡವೆಂದದನು ಮಾಡುವುದಪರಾಧ ।।**

ಎಂಬುದಾಗಿ. ಶ್ರೀರಾಜರ ಶಿಷ್ಯರು ಅವರಿಂದಲೇ ದಾಸದೀಕ್ಷೆ ಪಡೆದ ಶ್ರೀ ಪುರಂದರ ದಾಸರು ತಮ್ಮ ಒಂದು ಉಗಾಭೋಗದಲ್ಲಿ ಈ ಮಾತಿನ ವ್ಯಾಖ್ಯಾನದಂತೆ ತಿಳಿಸುವರು -

**ಅಲ್ಲದ ಕರ್ಮವ ಆಚರಿಸಿದವ ಕೆಟ್ಟ**
**ಲಲ್ಲೆ ಮಾತಿನ ಪತಿಯ ನಂಬಿದವ ಕೆಟ್ಟ**
**ಎಲ್ಲರೊಳಗೆ ವಿರೋಧಿಸಿದವ ಕೆಟ್ಟ**
**ಬಲ್ಲಿದರೊಡನೆ ಸೆಣಸಾಡುವವ ಕೆಟ್ಟ**
**ಫುಲ್ಲನಾಭ ಶ್ರೀಪುರಂದರವಿಠಲನ**
**ಮೆಲ್ಲಡಿಗಳನು ನಂಬದವನು ಕೆಟ್ಟ ನರಗೇಡಿ ।।**

ಒಬ್ಬ ಜೀವಿ ಮಾಡಬಾರದ್ದನ್ನು ಮಾಡಿ ಕೆಟ್ಟನೆಂದರೆ ಅಪರಾಧವೆಸಗಿದಂತೆ. ಅದಕ್ಕೆ ಪಾಪಲೇಪವುಂಟು. ಶಿಕ್ಷೆ ತಪ್ಪದು. ಹೀಗೆ ಕೆಡದಿರಲು ಅವರೇ ಹೇಳಿದಂತೆ ಅಲ್ಲದ ಕರ್ಮ = ನಿಷಿದ್ಧವಾದ ಶಾಸ್ತ್ರವಿರುದ್ಧ

ಕರ್ಮಗಳನ್ನು ಎಂದಿಗೂ ಆಚರಿಸದಿರಲು ಆದೇಶಿಸಿದರು. ಭಗವಂತನ ಆಜ್ಞಾರೂಪವಾದ ಶಾಸ್ತ್ರಗಳ ವಚನಗಳನ್ನು ಪಾಲಿಸಿರೆಂದರು. ಅದಕ್ಕೆ ದಾಸರು ಒಂದು ಕಡೆ -

**ಮಾಡು ದಾನ ಧರ್ಮ ಪರ ಉಪಕಾರವ ಮರೆಯದಿರೆಚ್ಚರಿಕೆ ।**
**ಮೂಢರ ಒಡನಾಡಿ ಮುಂದರಿಯದೇ ನೀನು ಮುನಿಯದಿರೆಚ್ಚರಿಕೆ ।।**

ಎಂದೂ ಎಚ್ಚರಿಸಿದರು. ಸಂಸಾರವೆಂದರೆ ಮನೆ, ಮಡದಿ, ಗಂಡ, ಮಕ್ಕಳು, ಪರಿವಾರ ಹೀಗೆ ಇವರಿಂದಲೂ ಕೆಡುವ ಸಂಭವಗಳು ಉಂಟು. ಅದಕ್ಕೂ ಎಚ್ಚರಿಸುವರು. ಯಾವ ಪ್ರಸಂಗಕ್ಕೂ ಎಲ್ಲೆ ಮೀರಿ ಹೋಗದಿರಿ ಎಂದರು. ಸಲ್ಲಾಪಾದಿಗಳಿಂದ ಮೈ ಮರೆತರೆ ಉದ್ಧಾರವಾಗಲಾರಿರೆಂದರು. ಕಾರಣ, ಮೈ-ಮನಗಳು ಎಡೆವ ಪ್ರಸಂಗಗಳೇ ಹೆಚ್ಚು. ಜೀವನದಲ್ಲಿ ಸಜ್ಜನನೆಂದೆನಿಸಿಕೊಳ್ಳಲು ಎಂದಿಗೂ ಯಾರಿಂದಲೂ ವೈರತ್ವ ಕಟ್ಟಿಕೊಳ್ಳ-ಬಾರದು. ವಿರೋಧ ಬೆಳೆಸಿಕೊಂಡಲ್ಲಿ ಕೆಟ್ಟಂತೆ. ಕಾರಣ, ಮನಸ್ಸಿನ ಏಕಾಗ್ರತೆಗೆ ಸಾಧನೆಗಳಿಗೆ ಧಕ್ಕೆಯುಂಟಾಗದಿರದು. ಅದಕ್ಕೆ ದಾಸರು ಒಂದು ಉಪಾಯವನ್ನು ಹೇಳಿದ್ದು ಹೀಗೆ -

**ಇದ್ದರಿರಬೇಕು ಸಂಸಾರ ಸುಖದಲ್ಲೀಗ ।**
**ಪದ್ಮಪತ್ರವು ಜಲದೊಳಿದ್ದಾಂಗೆ ।। - ಶ್ರೀವಿಜಯದಾಸರು**

ಶ್ರೀವಾದಿರಾಜರು ನೇರವಾಗಿ ಆಡಿದ ಮಾತು **'ಸಜ್ಜನರೊಡನಾಡೆಂದೆಂದು ದುರುಳರ ಕೂಡಾಟವ ಬಿಡು' ।।** ಎಂದು. ಈ ದುರುಳರ ಸಹವಾಸದಿಂದ ಕೆಡದಿರಲು, ಕೆಟ್ಟು ಸದ್ಗತಿ ಕಾಣದಿರಲು ಮಾಡಬೇಕಾದದ್ದು ಆ ಭಗವಂತನಲ್ಲಿ ಪ್ರಾರ್ಥನೆ. ಇದನ್ನೇ ಶ್ರೀವಿಜಯದಾಸರು ಹೀಗೆಂದರು -

**ಅಕುಟಿಲರಾದ ನಿನ್ನ ಭಕುತರ ಕೂಡ**
**ಸುಖತನ ಕೊಡು ಲವಮಾತ್ರ ದ್ವೇಷವು ಬೇಡ ।।**

ಎಂಬುದಾಗಿ. ಜನುಮ ಜನುಮಗಳಲ್ಲೂ ಜ್ಞಾನಿಗಳ ಸಂಗವಿರಲೆಂದರು. ಜ್ಞಾನಿಗಳು, ಸಾಧು - ಸಜ್ಜನರು, ಸನ್ಮಾರ್ಗ ಸೂಚಕರು, ಸದ್ಬುದ್ಧಿದಾಯಕರು. ಈ ಮಹಾನುಭಾವರನ್ನು ಎಂದಿಗೂ ದ್ವೇಷಿಸುವುದು, ವಿರೋಧಿಸುವುದು ಅನರ್ಥಹೇತುವಾಗಿದೆ. ಸೆಣಸಾಟ ದುರ್ಗತಿಗೆ ಆಹ್ವಾನವಿತ್ತಂತೆ. ಅಂತಹವನನ್ನು ಕೆಟ್ಟವನೆಂದರು. ದಾಸರ ಒಂದು ಮಾತು ಹೀಗಿದೆ -

**ಕುಜನರೊಳಗೆ ಸ್ನೇಹ ಎಂದೆಂದಿಗೂ ಒಲ್ಲೆ ।**

**ಸುಜನರ ಅಸಂತೋಷ ಬಿಡಿಸಲೊಲ್ಲೆ ।।**

ಎಂದು. ಮನುಷ್ಯ ಜೀವನದಲ್ಲಿ ಕೆಡುವುದಕ್ಕಿರುವ ಕೆಲ ಅಂಶಗಳನ್ನು ನಮ್ಮ ಮುಂದಿಟ್ಟ ದಾಸರು ಹಾಗಾಗದಿರಲು ಸೂಕ್ತ ಸಂದೇಶವನ್ನೂ ನೀಡಿದರು. ಶ್ರೀ ಶ್ರೀಪಾದರಾಜರ ವಚನ ಇಂತಿದೆ - **'ಭಕ್ತಜನರ ಸಂಗವು ದೊರಕಲಿ ರಂಗವಿಠಲ ನಿನ್ನ ದಯವಾಗಲಿ ಹರಿಯೇ ।'** ಎಂದು. ಇದರಂತೆ ಶ್ರೀ ಕನಕರು ಹೇಳಿದ್ದು -

**ಉಳ್ಳ ಪುಣ್ಯಾರ್ಥಗಳು ಕೊಳ್ಳೆ ಹೋಗದ ಮುನ್ನ**

**ಫುಲ್ಲನಾಭನ ಅಡಿಗೆ ಮೊರೆಹೋಗಿರೋ ।।**

ಎಂಬುದಾಗಿ. ಇದನ್ನೇ ಶ್ರೀ ಪುರಂದರ ದಾಸರೂ ಹೇಳಿದ್ದು **'ಫುಲ್ಲನಾಭ ಪುರಂದರ ವಿಠಲನ ಮೆಲ್ಲಡಿಗಳನು ನಂಬದವನು ಕೆಟ್ಟ'** ಎಂಬುದಾಗಿ. ಅಂದರೆ ಸದಾ ಭಗವಂತನ, ಭಗವದ್ಭಕ್ತರ ಚರಣಗಳನ್ನಾಶ್ರಯಿಸಿ ಉದ್ಧಾರವಾಗಿರೆಂದರು. ಶ್ರೀದಾಸರು ಸಜ್ಜನರನ್ನು ಉದ್ಧರಿಸಲೆಂದೇ ಅನೇಕರೀತಿಯಿಂದ ಗುಣದೋಷಗಳನ್ನು ಉಲ್ಲೇಖಿಸಿ ಸಮರ್ಪಕ ಸಲಹೆ, ಸಂದೇಶ, ಆದೇಶಗಳನ್ನು ನೀಡಿ ಪಾವನರನ್ನಾಗಿಸಿ ಸಲಹಿರುವುದು ನಮ್ಮ ಭಾಗ್ಯವಾಗಿದೆ.

**ಲೇಖಕರು:** Dr. ಶಾಮಾಚಾರ್, ಬೆಂಗಳೂರು